





## ಎಲ್ಲ ರಾಜ್ಯಗಳ 'ಭಾರತ ಪರ್ವ'

'ಭಾರತ ಪರ್ವ'ದಲ್ಲಿ ದೇಶದ ಎಲ್ಲಾ ರಾಜ್ಯಗಳಿಗೂ ಪ್ರಾತಿನಿಧ್ಯ ನೀಡಲಾಗುತ್ತದೆ. ಆಯಾ ರಾಜ್ಯಗಳ ಕಲೆ, ಸಂಸ್ಕೃತಿ, ಜನಪದ ಕಲೆಗಳು, ಅಭಿವೃದ್ಧಿ ಕಾರ್ಯಕ್ರಮಗಳ ಕುರಿತಾದ ಸ್ತಬ್ಧಚಿತ್ರಗಳು ಇರಲಿವೆ.

ನವದೆಹಲಿಯ ಕೆಂಪು ಕೋಟೆಯಲ್ಲಿ ಒಂದು ವಾರ ನಡೆಯುವ 'ಭಾರತ ಪರ್ವ'ದ ಉಸ್ತುವಾರಿ ಪ್ರವಾಸೋದ್ಯಮ ಇಲಾಖೆಯದ್ದು. ಕಾರ್ಯಕ್ರಮದಲ್ಲಿ ಆಯಾ ರಾಜ್ಯಗಳ ಕರಕುಶಲ ಕಲೆಗಳು, ಸಂಗೀತ, ತಿಂಡಿತಿನಿಸುಗಳು, ಸಾಂಸ್ಕೃತಿಕ ಪ್ರದರ್ಶನಗಳು 'ಏಕ್ ಭಾರತ್ ಶ್ರೇಷ್ಠ ಭಾರತ್' ಕಾರ್ಯಕ್ರಮದಡಿಯಲ್ಲಿ ಏರ್ಪಾಡಾಗುವುದು ವಿಶೇಷ.

ಈ ಬಾರಿ 'ಮಿಲೆಟ್ಸ್‌ನಿಂದ ಮೈಕ್ರೊಚಿಪ್‌ಗಳವರೆಗೆ' ಎಂಬ ಸ್ತಬ್ಧಚಿತ್ರ ಪರಿಕಲ್ಪನೆಯೊಂದಿಗೆ ಕರ್ನಾಟಕ ಸರ್ಕಾರವು ದೆಹಲಿಯತ್ತ ಸಾಗಲು ಸಿದ್ಧತೆ ನಡೆಸಿದೆ. ಸಿರಿಧಾನ್ಯ ಉತ್ಪಾದನೆಯಲ್ಲಿ ದೇಶದಲ್ಲಿ ಎರಡನೇ ಸ್ಥಾನದಲ್ಲಿರುವ ರಾಜ್ಯವು ದೇಶದ ಮಾಹಿತಿ ತಂತ್ರಜ್ಞಾನದಲ್ಲೂ ಮುಂಚೂಣಿಯಲ್ಲಿದೆ. ಇದರ ಪ್ರಾತಿನಿಧಿಕವಾಗಿ ಈ ಪರಿಕಲ್ಪನೆಯನ್ನು ಆಯ್ಕೆ ಮಾಡಿರುವ ರಾಜ್ಯ ಸರ್ಕಾರವು ಆ ನಿಟ್ಟಿನಲ್ಲಿ ಸಜ್ಜಾಗುತ್ತಿದೆ.



ಭಾರತವನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡಿದ್ದ ಬ್ರಿಟಿಷ್ ಸರ್ಕಾರಕ್ಕೆ ನವದೆಹಲಿಯು ಎರಡನೇ ರಾಜಧಾನಿಯಾಗಿತ್ತು. ಆಗ ಸರ್ ಎಡ್ವಿನ್ ಲೂಥೆನ್ಸ್ ಎಂಬ ವಾಸ್ತುಶಿಲ್ಪಿ ನೇತೃತ್ವದಲ್ಲಿ ನವದೆಹಲಿಯ ವಿಶಿಷ್ಟ ಬಗೆಯ ಕಟ್ಟಡಗಳು ಅರಳಿದವು. ಈ ಕಟ್ಟಡಗಳೂ ಗಣರಾಜ್ಯೋತ್ಸವದ ಆಕರ್ಷಣೆಯಾಗಿವೆ.

ಸೇನಾಪಡೆಯ ವಿವಿಧ ವಿಭಾಗಗಳ ಸೈನಿಕರು, ಆಧುನಿಕ ಶಸ್ತ್ರಗಳ ಪ್ರಸ್ತುತಿ ಜೊತೆಗೆ ರಾಜ್‌ಪಥ್‌ನಲ್ಲಿ (ಕರ್ತವ್ಯಪಥ) ಈ ನೆಲದ ಶ್ರೀಮಂತ ಸಂಸ್ಕೃತಿಯ ಪ್ರದರ್ಶನವೂ ಇಲ್ಲಿ ನಡೆಯಲಿದೆ. ಇವುಗಳೊಟ್ಟಿಗೆ ರಾಜ್ಯಗಳ ವೈಶಿಷ್ಟ್ಯಪೂರ್ಣ ಸಂಸ್ಕೃತಿ, ಜಾನಪದ ಕಲೆಗಳ ರಸದೌತಣವೂ ಇಲ್ಲಿ ಸಾಕಾರಗೊಳ್ಳಲಿದೆ. ಐದು ದಶಕಗಳು ತುಂಬಿರುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ 40ಕ್ಕೂ ಹೆಚ್ಚು ಬಾರಿ ಸ್ತಬ್ಧಚಿತ್ರಗಳನ್ನು ಪ್ರದರ್ಶಿಸಿರುವ ಹೆಗ್ಗಳಿಕೆ ಕರ್ನಾಟಕದ್ದು. ಕನ್ನಡಿಗರಿಗೆಲ್ಲ ಇದೊಂದು ಹೆಮ್ಮೆಯ ಸಂಗತಿ.

ರೇಷ್ಮೆ ವ್ಯವಸಾಯ, ತೋಟಗಾರಿಕೆ, ಕಾಫಿ ಬೆಳೆ, ವನ್ಯಲೋಕ, ರಂಗನತಿಟ್ಟು, ಕಣ್ಮನ ಸೆಳೆಯುವ ಕಡಲತೀರ, ಮೈಸೂರು ದಸರಾ, ಬಸವಣ್ಣ, ಬೆಂಗಳೂರು ಲಾಲ್‌ಬಾಗ್, ಹಂಪಿ ಕಲ್ಲಿನ ರಥ, ಶ್ರವಣಬೆಳಗೊಳದ ಗೊಮ್ಮಟೇಶ, ಶಿಲಾಬಾಲಿಕೆಯರ ಬೇಲೂರು, ಜನಪದ ಕಲೆಗಳಾದ ಸೋಮನ ಕುಣಿಕೆ, ಡೊಳ್ಳು ಕುಣಿತ, ಯಕ್ಷಗಾನ, ನಾಗಸ್ವರ, ಶ್ರೀಗಂಧದ ಕೆತ್ತನೆ, ಬಿದಿರಿ ಕಲೆ, ಚನ್ನಪಟ್ಟಣದ ಆಟಿಕೆ, ಕಿತ್ತೂರ ರಾಣಿ ಚೆನ್ನಮ್ಮ, ಟಿಪ್ಪು ಸುಲ್ತಾನ್, ಶೈಕ್ಷಣಿಕ ರಾಜಧಾನಿ ಸಿಲಿಕಾನ್ ಕಣಿವೆ ಹೀಗೆ ರಾಜ್ಯದ ಹಲವು ವಿಶೇಷಗಳು ಕಣ್ಮನ ಸೆಳೆಯುವ ಸ್ತಬ್ಧಚಿತ್ರಗಳಾಗಿ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ತನ್ನದೇ ಛಾಪು ಮೂಡಿಸಿವೆ. ಉತ್ತಮ ಸ್ತಬ್ಧಚಿತ್ರಗಳಿಗಾಗಿ ಪ್ರಥಮ ಸ್ಥಾನವೂ ಸೇರಿದಂತೆ ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಕರ್ನಾಟಕ ಭಾಜನವಾಗಿದೆ.

ಬಣ್ಣದ ಗೆರೆಗಳಾಗಿ, ಚಿತ್ರಗಳಿಂದ ಅರಳಿ ನಂತರ ಕಿರುಮಾದರಿಗಳಾಗಿ ಮಾರ್ಪಟ್ಟು ಪೂರ್ಣಪ್ರಮಾಣದ ಸ್ತಬ್ಧಚಿತ್ರಗಳಾಗಿ ಸಿದ್ಧಗೊಳ್ಳುವಲ್ಲಿ ಕಲಾವಿದರ, ಕುಶಲಕರ್ಮಿಗಳ ಕಲಾ ಕೌಶಲವಿದೆ. ಕರ್ನಾಟಕವನ್ನು ಪ್ರತಿನಿಧಿಸುವ ಸ್ತಬ್ಧಚಿತ್ರದ ನಿರ್ಮಾಣವು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹೊಣೆ. ಸ್ತಬ್ಧಚಿತ್ರಕ್ಕಾಗಿ ನಾಡಿನ ಪ್ರಖ್ಯಾತ ಕಲಾವಿದರಾದ ಎಸ್.ಜಿ. ವಾಸುದೇವ, ಎಂ.ಬಿ. ಪಾಟೀಲ್, ಜಿ.ಎಸ್. ಶೆಣೈ, ಶಶಿಧರ್ ಅಡಪ, ಸುರೇಶ್ ಮಹಾನ್, ಶ್ರೀ ಕಾಂತಶೆಟ್ಟಿ, ಬಸವರಾಜ್, ರಾಜಶೇಖರ್, ಸಂಜಯ ಮುಂತಾದವರು ಶ್ರಮವಹಿಸಿದ್ದಾರೆ. ಅವರ ಪರಿಶ್ರಮದಿಂದ ರೂಪುಗೊಂಡ ಸ್ತಬ್ಧಚಿತ್ರಗಳು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿವೆ.

ದೇಶ ವಿದೇಶಗಳ ಗಣ್ಯರು, ಅಸಂಖ್ಯ ದೇಶವಾಸಿಗಳ ಮುಂದೆ ತೆರೆದುಕೊಳ್ಳುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಲು ಎಲ್ಲ ರಾಜ್ಯಗಳು ಪಾಲ್ಗೊಳ್ಳುವ ಉಮೇದು ತೋರುತ್ತವೆ. ಇದಕ್ಕಾಗಿ ಸ್ತಬ್ಧಚಿತ್ರಗಳ ವಿಷಯ ನಿಖರತೆ, ಗಮನಸೆಳೆಯುವ ಅಂಶಗಳು, ಇದೆಲ್ಲವನ್ನು ಪರಿಶೀಲಿಸಲು ಖ್ಯಾತ ಕಲಾವಿದರು, ವಿನ್ಯಾಸಗಾರರು, ಎಂಜಿನಿಯರ್‌ಗಳನ್ನು ಒಳಗೊಂಡ ಉನ್ನತ ಮಟ್ಟದ ಸಮಿತಿಯನ್ನು ರಕ್ಷಣಾ ಇಲಾಖೆ ರಚಿಸುತ್ತದೆ. ಈ ಸಮಿತಿಯು ಪ್ರತಿ ವರ್ಷದ ಆಗಸ್ಟ್‌ನಿಂದಲೇ ಸ್ತಬ್ಧಚಿತ್ರಗಳ ಕೂಲಂಕಶ ಪರಿಶೀಲನಾ ಸಭೆಗಳನ್ನು ನಡೆಸಿ, ಕಿರುಮಾದರಿಗಳಿಂದ ಸ್ತಬ್ಧಚಿತ್ರಗಳಾಗುವ ತನಕ ನಿಗಾವಹಿಸುತ್ತದೆ.

ಗಣರಾಜ್ಯೋತ್ಸವ ಪರೇಡ್‌ಗೆ ವಿಶ್ವವ್ಯಾಪಿ ಪ್ರಚಾರ ದೊರೆಯುವುದರಿಂದ ಎಲ್ಲಾ ರಾಜ್ಯಗಳ ಪಾಲ್ಗೊಳ್ಳಲು ಹಾತೊರೆಯುತ್ತವೆ. ಆದರೆ ಪರೇಡ್‌ನಲ್ಲಿ ಅವಕಾಶ ಸಿಗುವುದು 15–20 ರಾಜ್ಯಗಳಿಗೆ ಮಾತ್ರ. ಅವಕಾಶ ಪಡೆಯಲು ಎಲ್ಲ ರಾಜ್ಯಗಳೂ ಇನ್ನಿಲ್ಲದ ಕಸರತ್ತನ್ನು ನಡೆಸುತ್ತವೆ.